# IX Semester 5 Year B.A. LL.B./B.B.A., LL.B. (Hons.) Examination, December 2016
# CIVIL PROCEDURE CODE AND LIMITATION ACT

Duration : $2^1/_2$ Hours | Max. Marks : 70

**Instructions** : 1. Answer Q. No. **8** and **any five** of the **remaining** questions.
2. Answer Q. No. **8** carries **20** marks and the **remaining** questions carry **10** marks **each**.
3. Answers should be written **either** in **English** or **Kannada** **completely**.

Q. No. 1. "Pleading should be confined to facts only. It should not contain law." Explain.

"ವಾದ–ವಿವಾದಾಂಶದ ಪತ್ರವು ಸಂಗತಿಗಳಿಗಷ್ಟೇ ಸೀಮಿತವಾಗಿರಬೇಕೆ ಹೊರತು ಕಾನೂನಿನಂಶಗಳನ್ನಲ್ಲ" ಎಂಬುದನ್ನು ವಿವರಿಸಿ.

Q. No. 2. Explain the rules relating to institution of suits under code of civil procedure.

ದಿವಾನಿ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ ದಾವೆಗಳನ್ನು ಹೂಡುವ ಬಗೆಗಿರುವ ನಿಯಮಗಳನ್ನು ವಿವರಿಸಿ.

Q. No. 3. Explain the rules relating to joinder of parties to the suit.

ದಾವೆಗೆ ಪಕ್ಷಗಾರರ ಸೇರ್ಪಡೆ ಸಂಬಂಧಿತ ನಿಯಮಗಳನ್ನು ವಿವರಿಸಿ.

Q. No. 4. Define the term 'issues'. Explain the provisions relating to framing, amending and striking out the issues.

'ವಿವಾದಾಂಶಗಳು' ಎಂಬ ಶಬ್ದವನ್ನು ವ್ಯಾಖ್ಯಾನಿಸಿ. ವಿವಾದಾಂಶಗಳ ರಚನೆ, ತಿದ್ದುಪಡಿ ಹಾಗೂ ತೆಗೆದು ಹಾಕುವ ಕುರಿತಾದ ಉಪಬಂಧಗಳನ್ನು ವಿವರಿಸಿ.

Q. No. 5. Explain the inherent powers of the court.

ನ್ಯಾಯಾಲಯದ ಅಂತರ್ಗತ ಅಧಿಕಾರಗಳನ್ನು ವಿವರಿಸಿ.

Q. No. 6. Explain the effects of fraud or mistake in filing a suit by the parties to a dispute, under the Limitation Act.

ದಾವಾವನ್ನು ಹೂಡುವಾಗ ಪಕ್ಷಗಾರರು ಮಾಡುವ ತಪ್ಪು ಅಥವಾ ಮೋಸ, ಕಾಲ ಪರಿಮಿತಿ ಅಧಿನಿಯಮದಡಿ ಉಂಟಾಗುವ ಪರಿಣಾಮಗಳನ್ನು ವಿವರಿಸಿ.

Q. No. 7. Short notes :

ಲಘು ಟಿಪ್ಪಣಿ ಬರೆಯಿರಿ :

a) Suit

ದಾವೆ

b) Temporary injunction

ತಾತ್ಕಾಲಿಕ ತಡೆಯಾಜ್ಞೆ

c) Doctrine of res - subjudice.

ರೆಸ್-ಸಬ್‌ಜುಡಿಸ್ ಸಿದ್ಧಾಂತ.

Q. No. 8.(a) The Govt. of Malenadu issues an order banning sale of liquor in the state in order to protect public health. 'X' challenges the validity of the said order before the High Court on the ground that it violates freedom of business under Art. 19(1)(g). The High Court dismisses the petition. Aggrieved by the said order 'X' files a fresh writ petition before the Supreme Court of India. Whether 'X' can succeed in the case ?

ಸಾರ್ವಜನಿಕ ಆರೋಗ್ಯದ ರಕ್ಷಣೆಯ ಉದ್ದೇಶದಿಂದ ಮಲೆನಾಡು ರಾಜ್ಯ ಸರ್ಕಾರ ಮದ್ಯವನ್ನು ನಿಷೇಧಿಸುವ ಆದೇಶವನ್ನು ಹೊರಡಿಸುತ್ತದೆ. 'X' ಎಂಬುವವನು ಸದರಿ ಆದೇಶವು ಅನುಚ್ಛೇದ 19(1) (g) ರ ಅಡಿಯಲ್ಲಿ ನೀಡಿರುವ ಉದ್ಯೋಗ ಮಾಡುವ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟುಮಾಡಿದೆ ಎಂದು ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯ ಮುಖಾಂತರ ಪ್ರಶ್ನಿಸುತ್ತಾನೆ. ನ್ಯಾಯಾಲಯವು ಅರ್ಜಿಯನ್ನು ತಿರಸ್ಕರಿಸುತ್ತದೆ. ಇದರಿಂದ ನೊಂದ 'X' ಹೊಸ ರಿಟ್ ಅರ್ಜಿಯನ್ನು ಸರ್ವೋಚ್ಚ ನ್ಯಾಯಾಲಯದ ಮುಂದೆ ಹಾಕುತ್ತಾನೆ. 'X' ಯಶಸ್ವಿಯಾಗುತ್ತಾನೆಯೇ ತಿಳಿಸಿ.

(b) 'A' files a suit against 'B' requesting the court to declare him as an owner of a property 'C'. The court dismisses the suit. 'A' files an appeal before appellate court. During the pendency of appeal, 'A' files a fresh suit against 'B' before the lower court requesting the court to issue decree for 'Mesne profit'. State whether second suit is maintainable.

'C' ಆಸ್ತಿಯ ಮೇಲೆ ತನಗೆ ಮಾಲಿಕತ್ವ ಇದೆ ಎಂದು ಘೋಷಿಸಬೇಕೆಂದು ವಿನಂತಿ ಮಾಡುತ್ತ 'A' ಯು'B' ವಿರುದ್ಧ ನ್ಯಾಯಾಲಯದಲ್ಲಿ ದಾವೆಯನ್ನು ಹಾಕುತ್ತಾನೆ. ನ್ಯಾಯಾಲಯವು ಸದರಿ ದಾವೆಯನ್ನು ತಿರಸ್ಕರಿಸುತ್ತದೆ. 'A' ಯು ಮೇಲ್ಮನವಿ ನ್ಯಾಯಾಲಯದ ಮುಂದೆ ಅಪೀಲ್ ಅರ್ಜಿಯನ್ನು ಹಾಕುತ್ತಾನೆ. ಸದರಿ ಅಪೀಲ್ ವಿಚಾರಣೆಯಲ್ಲಿರುವಾಗಲೇ 'A' ಆಸ್ತಿಯ ಲಾಭವನ್ನು ಕೇಳುವ ಸಲುವಾಗಿ ಕೆಳ ನ್ಯಾಯಾಲಯದಲ್ಲಿ 'B' ಯ ವಿರುದ್ಧ ಹೊಸ ದಾವೆಯನ್ನು ಹಾಕುತ್ತಾನೆ. ಎರಡನೇಯ ದಾವೆ ಊರ್ಜಿತವೇ ಎಂದು ತಿಳಿಸಿರಿ.

(c) 'A' enters into a contract with 'B' for supply of certain goods. The said contract was entered into in Bengaluru and 'B' was required to dispatch the goods to Bengaluru. 'B' fails to supply goods. 'A' files a suit against 'B' in Bengaluru city civil court. 'B' challenges the jurisdiction of the court on the ground that suit has to be filed where the defendant has the place of business. Suggest 'B'.

ಕೆಲ ವಸ್ತುಗಳ ಸರಬರಾಜು ಕುರಿತು 'A' ಯು 'B'ಯ ಜೊತೆ ಒಪ್ಪಂದವನ್ನು ಮಾಡಿಕೊಳ್ಳುತ್ತಾನೆ. ಸದರಿ ಒಪ್ಪಂದವು ಬೆಂಗಳೂರಿನಲ್ಲಿ ಏರ್ಪಡುತ್ತದೆ ಹಾಗೂ 'B'ಯು ವಸ್ತುಗಳನ್ನು ಬೆಂಗಳೂರಿಗೆ ಸರಬರಾಜು ಮಾಡುವ ಬಾಧ್ಯತೆಯನ್ನು ಹೊಂದಿರುತ್ತಾರೆ. 'B' ಯು ವಸ್ತುಗಳನ್ನು ಸರಬರಾಜು ಮಾಡುವಲ್ಲಿ ವಿಫಲನಾಗುತ್ತಾನೆ. 'A' ಯು ಬೆಂಗಳೂರು ನಗರದ ದಿವಾನಿ ನ್ಯಾಯಾಲಯದಲ್ಲಿ ದಾವೆ ಹಾಕುತ್ತಾನೆ. ದಾವೆಯು ಪ್ರತಿವಾದಿ ಎಲ್ಲಿ ವ್ಯವಹಾರ ಮಾಡುತ್ತಾನೋ ಅಲ್ಲಿ ಹಾಕಬೇಕೆಂದು ಹೇಳುತ್ತ 'B' ಯು ಸದರಿ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಪ್ರಶ್ನಿಸುತ್ತಾನೆ. 'B'ಗೆ ಸೂಕ್ತ ಸಲಹೆ ನೀಡಿ.